21	ಪ್ರಾ.ಪ.ಚಿ, ಮಾಳೂರು ಗಬಡಿ	–	1	–	–	1	2
22	ಪ್ರಾ.ಪ.ಚಿ, ಸಂಜಿಕಟ್ಟಿ	–	1	–	–	1	2
23	ಪ್ರಾ.ಪ ಚಿ, ಕಾನಗೋಡು	–	1	–	–	–	1
24	ಪ್ರಾ.ಪ.ಚಿ, ಭಾನಿಕೈಸರು	–	–	1	1	–	2
25	ಪ್ರಾ.ಪ ಚಿ, ಬಸವಾನಿ	–	–	1	–	–	1
26	ಪ್ರಾ.ಪ.ಚಿ, ಕೆ.ಬಿ.ಸರ್ಕಲ್	–	–	–	–	1	1
27	ಪ್ರಾ.ಪ.ಚಿ, ಹಾರೋಗುಳಿಗೆ	–	–	–	1	–	1
28	ಪ್ರಾ.ಪ.ಚಿ, ಹೆಬ್ಬಗೆ	–	–	–	–	1	1
29	ಪ್ರಾ.ಪ.ಚಿ, ಹೆದ್ಮೂರು	–	–	–	–	1	1
30	ಪ್ರಾ.ಪ ಚಿ, ಹೂದ್ಲ	–	–	–	–	1	1
31	ಪ್ರಾ.ಪ.ಚಿ, ಮರೆಹಳ್ಳಿ ಬಿಸಿಲಮನೆ	–	–	–	–	1	1
32	ಕೃ.ಗ.ಕೇಂದ್ರ, ಸೂದೂರು	–	–	1	–	–	1
33	ಕೃ.ಗ.ಕೇಂದ್ರ, ಆಗುಂಬೆ	–	–	1	–	–	1
34	ಕೃ.ಗ.ಕೇಂದ್ರ, ಕಲ್ಮನೆ	–	–	1	–	–	1
35	ಕೃ.ಗ ಕೇಂದ್ರ, ಸೋನಲೆ	–	–	1	–	1	2
	ಒಟ್ಟು	7	5	17	4	32	65

561 ಡಾ: ಮಹದೇವಪ್ಪ ಹೆಚ್.ಪಿ. (ಟಿ. ನರಸೀಪುರ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಒಂದು ವರ್ಷಕ್ಕೆ ಎಷ್ಟು ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ ಹಾಗೂ ರಾಜ್ಯದಲ್ಲಿ ವರ್ಷಕ್ಕೆ ಎಷ್ಟು ಮೆಗಾವ್ಯಾಟ್ ವಿದ್ಯುತ್‌ನ್ನು ತಯಾರಿಸಲಾಗುತ್ತಿದೆ (ಜಲ ಮೂಲಗಳಿಂದ ಮತ್ತು ಥರ್ಮಲ್ ಘಟಕಗಳಿಂದ ಪ್ರತ್ಯೇಕ ಮಾಹಿತಿ ಒದಗಿಸುವುದು);

ಆ) ಪ್ರತಿ ಯೂನಿಟ್ ವಿದ್ಯುತ್ ತಯಾರು ಮಾಡಲು ಸರ್ಕಾರಕ್ಕೆ ತಗಲುವ ವೆಚ್ಚವೆಷ್ಟು (ಜಲ ಮೂಲಗಳಿಂದ ಮತ್ತು ಥರ್ಮಲ್ ಘಟಕಗಳಿಂದ ಪ್ರತ್ಯೇಕ ಮಾಹಿತಿ ಒದಗಿಸುವುದು);

ಇ) ಒಂದು ಯೂನಿಟ್ ವಿದ್ಯುತ್‌ಗೆ ಸಾರ್ವಜನಿಕರಿಗೆ ವಿಧಿಸಲಾಗುವ ದರವೆಷ್ಟು (ಗೃಹ ಉಪಯೋಗಕ್ಕೆ ಮತ್ತು ವಾಣಿಜ್ಯ ಕಾರ್ಯಕ್ಕೆ ಮತ್ತು ರೈತರ ಪಂಪ್‌ಸೆಟ್ಟುಗಳಿಗೆ ವಿಧಿಸಲಾಗುವ ದರವೆಷ್ಟು ಪ್ರತ್ಯೇಕ ಮಾಹಿತಿ ನೀಡುವುದು);

ಈ) ಹೊರ ರಾಜ್ಯಗಳಿಂದ ವರ್ಷಕ್ಕೆ ಎಷ್ಟು ಮೆಗಾವ್ಯಾಟ್ ವಿದ್ಯುತ್‌ನ್ನು ಪಡೆಯಲಾಗುತ್ತಿದೆ;

ಉ) ಹೊರ ರಾಜ್ಯಗಳಿಂದ ಪಡೆಯುವ ಪ್ರತಿ ಯೂನಿಟ್‌ನ ಬೆಲೆ ಎಷ್ಟು; ಸಾರ್ವಜನಿಕರಿಗೆ ಹೊರ ರಾಜ್ಯಗಳಿಂದ ಪಡೆಯುವ ಪ್ರತಿ ಯೂನಿಟ್ ವಿದ್ಯುತ್‌ಗೆ ನಿಗದಿಪಡಿಸಿದ ದರವೆಷ್ಟು (ಗೃಹ ಉಪಯೋಗಕ್ಕೆ ಮತ್ತು ವಾಣಿಜ್ಯ ಕಾರ್ಯಕ್ಕೆ ಮತ್ತು ರೈತರ ಪಂಪುಸೆಟ್ಟುಗಳಿಗೆ ವಿಧಿಸಲಾಗುವ ದರವೆಷ್ಟು ಪ್ರತ್ಯೇಕ ಮಾಹಿತಿ ನೀಡುವುದು);

ಊ) ಇದರಲ್ಲಿ, ಕೇಂದ್ರ ಸರ್ಕಾರದ ಪಾಲು ಎಷ್ಟು (ಸಮಗ್ರ ಮಾಹಿತಿ ಒದಗಿಸುವುದು)

ಶ್ರೀ ಕೆ.ಎಸ್.ಈಶ್ವರಪ್ಪ (ಇಂಧನ ಸಚಿವರು) :

ಅ) ಕಳೆದ ಸಾಲಿನಲ್ಲಿ (2008–09) ರಾಜ್ಯದ ವಿದ್ಯುತ್ ಗರಿಷ್ಠ ಬೇಡಿಕೆಯು ಸುಮಾರು 8228 ಮೆ.ವ್ಯಾಟ್‌ಗಳೆಂದು ಅಂದಾಜು ಮಾಡಲಾಗಿದ್ದು, ವಿದ್ಯುತ್ ಪೂರೈಕೆಗೆ ಗರಿಷ್ಠ ಮಟ್ಟದಲ್ಲಿ ಲಭ್ಯವಾದ ವಿದ್ಯುತ್ 6548 ಮೆ.ವ್ಯಾಟ್‌ಗಳು ಇದೇ ರೀತಿ, 2008–09ನೇ ಸಾಲಿನಲ್ಲಿ ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆಯು ಸುಮಾರು 46,965 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದ್ದು, ಸದರೀ ಸಾಲಿನಲ್ಲಿ ರಾಜ್ಯದ ಆಂತರಿಕ ಉತ್ಪಾದನೆಯೂ ಸೇರಿದಂತೆ ಎಲ್ಲಾ ಮೂಲಗಳಿಂದ ರಾಜ್ಯಕ್ಕೆ ಲಭ್ಯವಾದ ವಿದ್ಯುತ್ತಿನ ಒಟ್ಟು ಪ್ರಮಾಣ 41,799 ದಶಲಕ್ಷ ಯೂನಿಟ್ಟುಗಳು (ತಾತ್ಕಾಲಿಕ). ಮೂಲವಾರು ಮಾಹಿತಿಗಳನ್ನು **ಅನುಬಂಧ–1ರಲ್ಲಿ** ಒದಗಿಸಲಾಗಿದೆ.

ಆ) 2008–09 ನೇ ಸಾಲಿನಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ವಿವಿಧ ಮೂಲಗಳಿಂದ ಉತ್ಪಾದಿಸಿದ ವಿದ್ಯುತ್ತಿಗೆ ತಗುಲಿದ ಸರಾಸರಿ ವೆಚ್ಚ ಈ ಕೆಳಕಂಡಂತಿದೆ:

ಜಲವಿದ್ಯುತ್	: 44.77 ಪೈಸೆ ಪ್ರತಿ ಯೂನಿಟ್‌ಗೆ
ಶಾಖೋತ್ಪನ್ನ	: 282.74 ಪೈಸೆ ಪ್ರತಿ ಯೂನಿಟ್‌ಗೆ
ಪವನ ಶಕ್ತಿ	: 238.90 ಪೈಸೆ ಪ್ರತಿ ಯೂನಿಟ್‌ಗೆ
ಡೀಸೆಲ್ ಸ್ಥಾವರ	: 821.97 ಪೈಸೆ ಪ್ರತಿ ಯೂನಿಟ್‌ಗೆ
ಒಟ್ಟಾರೆ	**: 166.01 ಪೈಸೆ ಪ್ರತಿ ಯೂನಿಟ್‌ಗೆ**

ಇ) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ 2005ರ ವಿದ್ಯುತ್ ದರ ಆದೇಶದ ಪ್ರಕಾರ, ಗೃಹ ಬಳಕೆ, ವಾಣಿಜ್ಯ ಮತ್ತು ರೈತರ ಪಂಪುಸೆಟ್ಟುಗಳಿಗೆ ವಿಧಿಸಲಾಗುತ್ತಿರುವ ವಿದ್ಯುತ್ ದರಗಳ ವಿವರಗಳನ್ನು **ಅನುಬಂಧ–1**ರಲ್ಲಿ ಒದಗಿಸಲಾಗಿದೆ.

(ಅನುಬಂಧದ–1, 2 & 3 ರ ಪುಟಗಳು ಜಾಸ್ತಿ ಇರುವುದರಿಂದ ಅದರ ಪ್ರತಿಯನ್ನು ಮಾನ್ಯ ವಿಧಾನ ಸಭಾ ಸದಸ್ಯರಿಗೆ ಪತ್ಯೇಕವಾಗಿ ಒದಗಿಸಲಾಗಿದೆ)

ಈ) ಮತ್ತು ಉ) ರಾಜ್ಯವು ಛತ್ತೀಸ್‌ಗಡ ರಾಜ್ಯ ವಿದ್ಯುತ್ ಮಂಡಳಿಯಿಂದ ಫೆಬ್ರವರಿ 2009 ರಿಂದ ಏಪ್ರಿಲ್ 2009 ರವರೆಗೆ ಒಟ್ಟು 356.84 ದಶಲಕ್ಷ ಯೂನಿಟ್ಟುಗಳನ್ನು ಖರೀದಿಸಿರುತ್ತದೆ. ವಿವರಗಳು ಕೆಳಕಂಡಂತಿವೆ:

ಕ್ರ. ಸಂ.	ತಿಂಗಳು	ಖರೀದಿಸಿದ ವಿದ್ಯುತ್ (ದ.ಲ.ಯೂನಿಟ್ಟುಗಳಲ್ಲಿ)	ದರ (ರೂ.ಗಳಲ್ಲಿ) ಕೆ.ಡಬ್ಲ್ಯೂ ಹೆಚ್)
1	ಫೆಬ್ರವರಿ 09	96.05	6.34
2	ಮಾರ್ಚ್ 09	116.79	9.05
3	ಏಪ್ರಿಲ್ 09	144.00	9.05
	ಒಟ್ಟು	**356.84**	

ಹೊರ ರಾಜ್ಯಗಳ ಇತರ ಮೂಲಗಳಿಂದ ಖರೀದಿಸಲಾದ ವಿದ್ಯುತ್ ಮತ್ತು ಇದಕ್ಕೆ ನೀಡಲಾದ ಖರೀದಿ ದರಗಳ ವಿವರಗಳನ್ನು **ಅನುಬಂಧ–3** ರಲ್ಲಿ ಒದಗಿಸಲಾಗಿದೆ.

ಹೊರ ರಾಜ್ಯಗಳಿಂದ ಪಡೆಯಲಾಗುವ ವಿದ್ಯುತ್ತಿಗೆ ತಗಲುವ ವೆಚ್ಚದ ಮೇಲೆ ವಿದ್ಯುತ್ ಸರಬರಾಜು ಕಂಪನಿಗಳಿಂದ ಗ್ರಾಹಕರುಗಳಿಗೆ ನೇರವಾಗಿ ಯಾವುದೇ ಹೆಚ್ಚುವರಿ ದರವನ್ನು ವಿಧಿಸಲಾಗುತ್ತಿಲ್ಲ. ರಾಜ್ಯದಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ವಿದ್ಯುತ್ ದರಗಳ ನಿಗದಿಪಡಿಸುವಿಕೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಪ್ರಸ್ತುತ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ 2005ರ ವಿದ್ಯುತ್ ದರ ಆದೇಶದ ಪ್ರಕಾರ ಗ್ರಾಹಕರುಗಳಿಗೆ ವಿದ್ಯುತ್ ದರವನ್ನು ವಿಧಿಸಲಾಗುತ್ತಿದೆ.

ಊ) ಕಳೆದ ವರ್ಷದಲ್ಲಿ (2008–09) ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಲಭ್ಯವಾಗಬೇಕಾಗಿದ್ದ ರಾಜ್ಯದ ಪಾಲು 10041

ದಶಲಕ್ಷ ಯೂನಿಟ್ಟುಗಳು. ಇದರಲ್ಲಿ, ಈ ಸಾಲಿನಲ್ಲಿ ಪಡೆಯಲಾದ ರಾಜ್ಯದ ಪಾಲು 9789.80 ದಶಲಕ್ಷ ಯೂನಿಟ್ಟುಗಳು. ವಿದ್ಯುತ್ ಲಭ್ಯತೆಯಲ್ಲಿ 251.20 ದಶಲಕ್ಷ ಯೂನಿಟ್ಟುಗಳಷ್ಟು ಕಡಿಮೆಯಾಗಿರುತ್ತದೆ. ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಈ ಸಾಲಿನಲ್ಲಿ ಲಭ್ಯವಾದ ವಿದ್ಯುತ್ ಪ್ರಮಾಣದ ವಿವರಗಳು ಈ ಕೆಳಕಂಡಂತಿದೆ:–

ಕ್ರ. ಸಂ.	ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳು	2008–09ನೇ ಸಾಲಿನಲ್ಲಿ ಪಡೆಯಲಾದ ರಾಜ್ಯದ ಪಾಲು (ದಶಲಕ್ಷ ಯೂನಿಟ್ಟುಗಳಲ್ಲಿ)
1	ರಾಮಗುಂಡಂ–ಎನ್.ಟಿ.ಪಿ.ಸಿ–ಹಂತ 1, 2 ಮತ್ತು 3.	4016.28
2	ತಾಲ್ಚೇರ್–ಎನ್.ಟಿ.ಪಿ.ಸಿ.–ಹಂತ–2	2612.60
3	ನೈವೇಲಿ ಲಿಗ್ನೈಟ್ ನಿಗಮದ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರ–2–ಹಂತ–1 ಮತ್ತು 2 ಹಾಗೂ ವಿದ್ಯುತ್ ಉತ್ಪಾದನಾ ಕೇಂದ್ರ–1–ವಿಸ್ತರಣ	2413.33
4	ಮದ್ರಾಸ್ ಅಣು ವಿದ್ಯುತ್ ಉತ್ಪಾದನಾ ಕೇಂದ್ರ	90.38
5	ಕೈಗಾ ಅಣು ವಿದ್ಯುತ್ ಉತ್ಪಾದನಾ ಕೇಂದ್ರ–ಯೂನಿಟ್ 1,2 ಮತ್ತು 3	657.21
	ಒಟ್ಟು	**9789.80**

1092 ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾನಿಲಯಗಳಲ್ಲಿನ ವಿವಿಧ ಕೋರ್ಸ್‌ಗಳು, ಸಂಯೋಜನೆ ಶುಲ್ಕ, ಮುಂದುವರಿಕೆ ಶುಲ್ಕ, ಅರ್ಹತಾ ಶುಲ್ಕ ಒಂದೇ ರೀತಿಯಲ್ಲಿ ಇದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು;

ಆ) ಯಾವ ಯಾವ ವಿಶ್ವವಿದ್ಯಾನಿಲಯಗಳು ಎಷ್ಟು ಸಂಯೋಜನಾ ಶುಲ್ಕವನ್ನು ಪಡೆಯುತ್ತಿವೆ (ಸಂಪೂರ್ಣ ವಿವರವನ್ನು ಒದಗಿಸುವುದು)?